ಇ) ಸಂಘದ ಉಪನಿಯಮಗಳ ಪ್ರಕಾರ ಸಂಘದ ಸದಸ್ಯರುಗಳಿಗೆ ಕಮ್ಮಾರಿಕೆ, ಬಿದಿರು ಕಸುಬು ಇತ್ಯಾದಿ ಕೈಗಾರಿಕೆಗಳನ್ನು ನಡೆಸಲು ಹಣಕಾಸಿನ ಸೌಲಭ್ಯ ಒದಗಿಸುವ ಉದ್ದೇಶ ಹೊಂದಿರುತ್ತದೆ.

ಈ) ಸಂಘವು ಖಾದಿ ಗ್ರಾಮೋದ್ಯೋಗ ಮಂಡಳಿಗೆ ರೂ. 2,27,432.00ಗಳ ಕೈಗಾರಿಕಾ ಸಾಲವನ್ನು ತುಮಕೂರು ಕೈಗಾರಿಕಾ ಬ್ಯಾಂಕ್‌ಗೆ ರೂ. 25,765.00ಗಳ ಸಾಲ ಮರುಪಾವತಿ ಮಾಡದೆ ಸುಸ್ತಿಯಾಗಿರುತ್ತದೆ. ಸದಸ್ಯರುಗಳಿಂದ ಸಾಲದ ಬಾಬ್ತು ರೂ. 1.70,136.00 ಬರಬೇಕಾಗಿದ್ದು, ಸಂಘವು ರೂ. 1,95,224.00 ಗಳಷ್ಟು ಕ್ರೋಢೀಕೃತ ನಷ್ಟದಲ್ಲಿರುತ್ತದೆ ಸದಸ್ಯರಿಂದ ಅಲ್ಪ ಪ್ರಮಾಣದಲ್ಲಿ ವಸೂಲಾದ ಸಾಲದ ಮೊತ್ತದಲ್ಲಿ ಸಂಘದ ಬಾಡಿಗೆ ಇನ್ನಿತರ ಖರ್ಚುಗಳನ್ನು ಭರಿಸಲಾಗುತ್ತಿದ್ದು, ಸಂಘದ ವಹಿವಾಟು ಕುಂಠಿತವಾಗಿರುತ್ತದೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲು ಸರ್ಕಾರವು ರೂ. 1,665.00ಗಳ ಶೇರು ಹಣವನ್ನು ಧನಸಹಾಯ ರೂಪದಲ್ಲಿ ನೀಡಿರುತ್ತದೆ.

ಉ) ಈ ಸಂಘವು ಹೆಚ್ಚಿನ ಸಂಪನ್ಮೂಲ ಕ್ರೋಢೀಕರಿಸಿ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅಳವಡಿಸಿಕೊಂಡು ಪುನಃಶ್ಚೇತನಗೊಳಿಸಲು ಕ್ರಮವಹಿಸಲಾಗುವುದು. ಈ ಮೂಲಕ ಸಣ್ಣ ಪ್ರಮಾಣದ ಕಸುಬುದಾರರಿಗೆ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು.

ತುರುವೇಕೆರೆ ತಾಲ್ಲೂಕಿನ ದುಂಡ ಗ್ರಾಮದ ಬಳಿ ಹೇಮಾವತಿ ಯೋಜನೆಯ ಚಾನಲ್ ಕೆಲಸ ಸ್ಥಗಿತಗೊಂಡಿರುವ ಬಗ್ಗೆ

4245 (4958) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದುಂಡ ಗ್ರಾಮದ ಬಳಿ ಬರುವ ಚಾನಲ್ (ರೈಲ್ವೆ ಲೈನ್ ಕೆಳಗೆ ಹಾದುಹೋಗುವ) ಕೆಲಸ ಸ್ಥಗಿತಗೊಳ್ಳಲು ಕಾರಣವೇನು;

ಆ) ರೈಲ್ವೆ ಇಲಾಖೆಗೆ ಹಣ ಕಟ್ಟಿದ್ದರೂ ಅನುಮತಿ ಕೊಡದಿರಲು ಕಾರಣವೇನು;

ಇ) ಹಲವಾರು ವರ್ಷದಿಂದ ರೈತರು ಆ ಭಾಗದಲ್ಲಿ ನೀರಿಲ್ಲದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

ಈ) ಈಗಲಾದರೂ ಕೆಲಸ ಪ್ರಾರಂಭ ಮಾಡಲಾಗುವುದೇ?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ರೈಲ್ವೆ ಇಲಾಖೆಗೆ ಪಾವತಿಸಬೇಕಾಗಿದ್ದ ಠೇವಣಿ ಮೊತ್ತ ರೂ. 29,69,197.00ಗಳು ಪಾವತಿಸಲು ವಿಳಂಬವಾದ್ದರಿಂದ ಕಾಮಗಾರಿ ಪ್ರಾರಂಭಿಸಲು ತಡವಾಗಿರುತ್ತದೆ.

ಆ) ರೈಲ್ವೆ ಇಲಾಖೆಯಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲು ರೂ. 20,69,197,00 ಗಳನ್ನು ಠೇವಣಿ ಇಡಲಾಗಿದೆ. ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆದಿರುತ್ತಾರೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ರೈಲ್ವೆ ಇಲಾಖೆಯು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಟೆಂಡರ್ ಕರೆದಿರುತ್ತಾರೆ.

ಕಾವೇರಿ ನೀರಾವರಿ ನಿಗಮದ ಯೋಜನೆಗಳ ಬಗ್ಗೆ

4246 (4959) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾವೇರಿ ನೀರಾವರಿ ನಿಗಮದ ಯೋಜನೆಗಳು ಯಾವಾಗ ಜಾರಿಗೆ ಬಂದಿದೆ?

ಆ) ನಿಗಮದ ಉದ್ದೇಶಗಳೇನು?

ಇ) ಈ ನಿಗಮವು ಹೇಮಾವತಿ ಯೋಜನೆಗೆ ಮಾಡಬಹುದಾದ ಕಾರ್ಯಕ್ರಮಗಳನ್ನು ಗುರುತಿಸಲಾಗಿದೆಯೇ: (ವಿವರ ಕೊಡುವುದು)?

ಈ) ಕಾರ್ಯಕ್ರಮಗಳು ಯಾವಾಗ ಪ್ರಾರಂಭ ಆಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಕಾವೇರಿ ಜಲಾನಯನ ಪ್ರದೇಶದಲ್ಲಿ ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸುವುದು ಹಾಗೂ ಅಚ್ಚುಕಟ್ಟು ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕಾರ್ಯವು ಪ್ರಸಕ್ತ ವರ್ಷದಿಂದ ಜಾರಿಗೆ ಬಂದಿದೆ

ಆ)1) ಕಾವೇರಿ ಜಲಾನಯನ ಪ್ರದೇಶದಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ವಹಿಸಿಕೊಡುವ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸುವುದು. ಯೋಜನೆಗಳ ನಿರ್ವಹಣೆ, ಚಾಲನೆ ಅಭಿವೃದ್ಧಿ ಹಾಗೂ ಆಧುನೀಕರಣ ಕೈಗೊಳ್ಳುವುದು.

2) ನೀರನ್ನು ಸದ್ಬಳಕೆಯಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಲು ಕಾರ್ಯಕ್ರಮ ರೂಪಿಸಿಕೊಳ್ಳುವುದು.

3) ಕುಡಿಯುವ ನೀರಿನ ಸರಬರಾಜಿಗಾಗಿ ಎಲ್ಲಾ ರೀತಿಯ ಪ್ರೋತ್ಸಾಹ ನೀಡುವುದು

4) ಯೋಜನೆಗಳಿಂದ ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸುವುದು.

5) ಕೃಷಿ ಉತ್ಪಾದನೆಯನ್ನು ಅಭಿವೃದ್ಧಿಗೊಳಿಸಲು ಆಧುನಿಕ ವ್ಯವಸಾಯ ಪದ್ಧತಿಯಾದ ಹನಿ ಮತ್ತು ತುಂತುರು ನೀರಾವರಿ ರೀತಿಯನ್ನು ಪ್ರೋತ್ಸಾಹಿಸುವುದು.

6) ಅಂತರ್ಜಲದ ಪುನರ್ ಬಳಕೆಯನ್ನು ಪರಿಣಾಮಕಾರಿಯಾಗಿ ಬಳಸಲು ಅಗತ್ಯ ಕ್ರಮವನ್ನು ಕೈಗೊಳ್ಳುವುದು.

7) ನೀರಾವರಿ ನಿರ್ವಹಣೆಯಲ್ಲಿ ಸಹಭಾಗಿತ್ವ ಪ್ರೋತ್ಸಾಹಿಸುವುದು

8) ನೀರಾವರಿ ಯೋಜನೆಗಳ ಪ್ರದೇಶದಲ್ಲಿ ಪರಿಸರ ಸಂರಕ್ಷಣೆ ಹಾಗೂ ಅರಣ್ಯಾಧೀಕರಣವನ್ನು ಹಾಗೂ ಇತ್ಯಾದಿ ಕ್ರಮಗಳನ್ನು ತೆಗೆದುಕೊಳ್ಳುವುದು

9) ಜಲಾಶಯದ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೊಳಿಸುವುದು ಹಾಗೂ ಮೀನು ಉತ್ಪಾದನೆ ಇತ್ಯಾದಿಗಳನ್ನು ಪ್ರೋತ್ಸಾಹಿಸುವುದು

10) ಈ ಮೇಲ್ಕಂಡ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವಾಗ ನ್ಯಾಯಮಂಡಳಿಗಳ ತೀರ್ಪು ಹಾಗೂ ನಿರ್ಧಾರಗಳಿಗೆ ಬದ್ಧವಾಗಿರುವುದು.

ಇ) ಹೇಮಾವತಿ ಯೋಜನೆಗೆ ಸಂಬಂಧಿಸಿದಂತೆ ಹೇಮಾವತಿ ಯೋಜನಾ ವಲಯ, ಗೋರೂರು ಹಾಗೂ ಹೇಮಾವತಿ ಕಾಲುವೆ ವಲಯ, ತುಮಕೂರು ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಮಗಾರಿಗಳು ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಸೇರಿರುತ್ತದೆ.

ಈ) ಕಾವೇರಿ ನೀರಾವರಿ ನಿಗಮ ಅಸ್ತಿತ್ವದಲ್ಲಿ ಬಂದಿದ್ದು ಕಾರ್ಯ ಆರಂಭಿಸಿದೆ.